# ಆಹಾ ಸುದ್ದಿ!

★ ಸಸಿತೋಟ

ಚೀನಾದ ಹುನಾನ್ ಪ್ರಾಂತ್ಯದಲ್ಲಿ ಸ್ಕೂಟರ್‌ನಲ್ಲಿ ಐವರು ಪ್ರಯಾಣಿಸುವುದು ಮಾಮೂಲು. ಜೊತೆಗೆ ಮಕ್ಕಳನ್ನೂ ಹೆಗಲ ಮೇಲೋ, ತೊಡೆ ಮೇಲೋ ಕೂರಿಸಿಕೊಂಡು ಸವಾರಿ ಹೊರಡುತ್ತಾರಂತೆ. ಅವರು ನೇರವಾಗಿ ಸ್ಕೂಟರ್ ಮೇಲೆ ಕೂರುವುದಿಲ್ಲವಾದ್ದರಿಂದ ಲೆಕ್ಕಕ್ಕಿಲ್ಲ. ಚೀನಾದ ಈ ಪರಿಯನ್ನು ನಾವು ಮಾದರಿ ಇಟ್ಟುಕೊಳ್ಳಬಹುದೇನೋ!!



ನ್ಯೂಯಾರ್ಕ್‌ನ ಎಕ್ಸ್‌ಪ್ಲೋರರ್ಸ್ ಕ್ಲಬ್‌ನ ವಾರ್ಷಿಕೋತ್ಸವದ ಊಟಕ್ಕೆ ಸಿದ್ಧವಾದ ಭಕ್ಷ್ಯವಿದು. ಆಡಿನ ಜನನಾಂಗಗಳನ್ನು ಹುರಿದು, ಮಸಾಲೆ ತುಂಬಿಸಿ , ಅಲಂಕರಿಸಿ ಸ್ವಾಹಾ ಮಾಡಲು ಸಿದ್ಧವಾಗಿವೆ. ಭೂಮಿ, ಆಕಾಶ, ಜಲ ಮತ್ತು ಬಾಹ್ಯಾಕಾಶದ ಸಂಶೋಧನೆಗೆ ನೆರವು ನೀಡುವ ಈ ಕ್ಲಬ್ ಅಲ್ಲೆಲ್ಲ ಸಿಗುವ ಹುಳ- ಹುಪ್ಪಟೆ, ಪ್ರಾಣಿಗಳ ವಿವಿಧ ಭಾಗಗಳು, ಒಳಗಿರುವ ಅಂಗಾಂಗಗಳ ಭಕ್ಷ್ಯಗಳನ್ನು ಜನಪ್ರಿಯಗೊಳಿಸುತ್ತಿದೆ. ಓಡಾಡುವ, ಹಾರಾಡುವ, ಈಜಾಡುವ, ತೆವಳುವ ಜೀವಿಗಳೆಲ್ಲ ನಾಲಗೆಗೂ ರುಚಿ ಎಂಬ ಗಾದೆ ಹುಟ್ಟುಹಾಕಲು ಅಡ್ಡಿಯಿಲ್ಲ.



ಪೋಕರ್ ಪಂದ್ಯದ ಮೇಲಿನ ಬೆಟ್‌ನಲ್ಲಿ ಸೋತ ನ್ಯೂಜಿಲೆಂಡ್ ವ್ಯಕ್ತಿಯೊಬ್ಬ ಬೆಟ್ ನಿಯಮದಂತೆ ತನ್ನ ಹೆಸರನ್ನು ಬದಲಾಯಿಸಿಕೊಂಡಿದ್ದಾನಂತೆ. ಅದರ ಪ್ರಕಾರ ಆತನ ಹೆಸರೀಗ 'ಫುಲ್ ಮೆಟಲ್ ಹ್ಯಾವೊಕ್ ಮೋರ್ ಸೆಕ್ಸಿ ಆ್ಯಂಡ್ ಇಂಟೆಲಿಜೆಂಟ್ ದ್ಯಾನ್ ಸ್ಪಾಕ್ ಆ್ಯಂಡ್ ಆಲ್ ದಿ ಸೂಪರ್‌ಹೀರೋಸ್ ಕಂಬೈನ್ಡ್ ವಿದ್ ಫ್ರೋಸ್ನೋವಾ'. ಹೆಸರು ಹೇಳುವ ಬದಲು ನೇರವಾಗಿ ವಿಸಿಟಿಂಗ್ ಕಾರ್ಡ್ ನೀಡಬಹುದು. ವಿಚಿತ್ರವೆಂದರೆ ನ್ಯೂಜಿಲೆಂಡ್ ನಾಮಕರಣ ನೀತಿ ಹೊಂದಿದ್ದು, ಕಿಂಗ್, ನೈಟ್, ಪ್ರಿನ್ಸೆಸ್ ಮೊದಲಾದ ಹೆಸರುಗಳನ್ನು ಇಡುವಂತಿಲ್ಲ. ಆದರೆ ಅದೇಕೋ ಫ್ರೋಸ್ನೋವಾ ಹೆಸರು ಬದಲಾವಣೆಗೆ ಒಪ್ಪಿಗೆ ನೀಡಿದ್ದು, ಬೆಟ್ ಗೆದ್ದ ಎದುರಾಳಿ ಪ್ರಭಾವಶಾಲಿಯೇ ಇರಬಹುದು.

ಚೀನಾದಲ್ಲಿ ಇತ್ತೀಚೆಗೆ ಮಾರಾಟವಾದ ಈ ಟಿಬೇಟನ್ ಮಾಸ್ಟಿಫ್ ತಳಿಯ ನಾಯಿಗಳ ಬೆಲೆ 30 ಲಕ್ಷ ಡಾಲರ್. ಚೀನಾದಲ್ಲಿ ಶ್ರೀಮಂತರು ಈ ತಳಿಯ ನಾಯಿಗಳನ್ನು ಹೊಂದುವುದು ಪ್ರತಿಷ್ಠೆಯ ಸಂಕೇತವಾಗಿದೆಯಂತೆ. ಆದರೆ ಅಲ್ಲಿ ಇನ್ನೂ ನಾಯಿಗಳಿಗೆ ನಾಯಕರ ಹೆಸರನ್ನು ಇಡುವ ಪ್ರತಿಷ್ಠೆ ಶುರುವಾಗಿಲ್ಲವಂತೆ.



ವಾಷಿಂಗ್ಟನ್‌ನಲ್ಲಿ ಪೋಸ್ಟಲ್‌ವೇಟ್ ಎಂಬಾತ ಮರದಲ್ಲಿ ಕಟ್ಟಿಕೊಂಡಿರುವ ಮನೆ. ಕಾಲ್ದಾರಿಯಲ್ಲಿ ಸಾಗುವವರ ಜೀವಕ್ಕೆ ಅಪಾಯವೆಂದು ಮನೆಯನ್ನು ತೆಗೆಯಲು ನಗರಾಡಳಿತ ಹೇಳಿದೆಯಂತೆ. ಅಲ್ಲೇ ಇರುವ ಆಸೆಯಿದ್ದರೆ 10 ಲಕ್ಷ ಡಾಲರ್ ವಿಮೆ ಇಳಿಸಲು ಸೂಚಿಸಿದೆಯಂತೆ. ಯಾವುದಕ್ಕೂ ಬಗ್ಗದ ಪೋಸ್ಟಲ್‌ವೇಟ್ ವಿರುದ್ಧ ನಗರಾಡಳಿತ ಈಗ ಕೋರ್ಟಿಗೆ ಹೋಗಿದ್ದು, ವೇಟ್‌ನ ವೇಟೇಜ್ ಎಷ್ಟಿದೆ ಎಂಬುದು ಸದ್ಯಕ್ಕೆ ಅಲ್ಲಿ ಚರ್ಚೆಯ ವಿಷಯ. ಇಂಚಿಂಚೂ ಜಾಗಕ್ಕೂ ಪರದಾಡುವ ಬೆಂಗಳೂರಿನಲ್ಲಿ ಈ ಮರದ ಮನೆ ಐಡಿಯಾ ಬಂದರೂ ಮನೆಯ ಜೊತೆ ಮರವೇ ಕಾಣೆಯಾಗಿಬಿಡುತ್ತದೆ ಅಷ್ಟೆ.



ಅಮೆರಿಕಾದಲ್ಲಿ 'ಮಾರ್ಚ್ ಹುಚ್ಚು' ಶುರುವಾಗಿದೆಯಂತೆ. ಅಲ್ಲಿ ಕಾಲೇಜು ಬಾಸ್ಕೆಟ್‌ಬಾಲ್ ಪಂದ್ಯಾವಳಿಗಳು ಶುರುವಾಗಿದ್ದು ಪುರುಷರ ಸಂತಾನ ಹರಣ ಶಸ್ತ್ರಚಿಕಿತ್ಸೆಗಳು ದಾಖಲೆ ಮಟ್ಟದಲ್ಲಿ ಆಗುತ್ತಿವೆಯಂತೆ. ಅದಕ್ಕೂ ಇದಕ್ಕೂ ಏನು ಸಂಬಂಧವೆಂದಿರಾ? ಅರ್ಧ ತಾಸಿನಲ್ಲಿ ನಡೆಯುವ ಈ ಶಸ್ತ್ರ ಚಿಕಿತ್ಸೆ ಮುಗಿದ ಮೇಲೆ 3-4 ದಿನಗಳ ಕಾಲ ಸಂಪೂರ್ಣ ವಿಶ್ರಾಂತಿ ಪಡೆಯಬಹುದು. ಸೋಫಾದ ಮೇಲೆ ಆರಾಮವಾಗಿ ಮಲಗಿ ಟಿ.ವಿ.ಯಲ್ಲಿ ಪಂದ್ಯಗಳನ್ನು ನೋಡುವುದು, ಪತ್ನಿ ಹೇಳುವ ಮನೆಗೆಲಸದಿಂದಲೂ ವಿನಾಯ್ತಿ.